ಉಪಾಧ್ಯಕ್ಷರು: ಸಮಸ್ಯೆಯನ್ನು ಅವರ ಗಮನಕ್ಕೆ ತಂದಿದ್ದೀರಿ, ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನ ಖಂಡಿತವಾಗುತ್ತದೆ.

ಶ್ರೀ ಪಿ.ಎಂ. ಅಶೋಕ್: ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ರಿಪೇರಿ ಸೆಂಟರ್‌ಗಳನ್ನು ತೆಗೆದು ಹಾಕಿ ಮುಚ್ಚಿಬಿಟ್ಟಿದ್ದಾರೆ, ರಿಪೇರಿ ಮಾಡಿಸಲು ನಾವು ಬೈಲಹೊಂಗಲಕ್ಕೆ ಹೋಗಬೇಕು. ಅನೇಕ ರೈತರು, ನಾವೆಲ್ಲಾ ರಿಕ್ವೆಸ್ಟ್ ಮಾಡಿ, ಮಂಜೂರು ಮಾಡಿಸಿದ್ದೇವೆ, ಆದರೆ ರಿಪೇರಿ ಸೆಂಟರ್ ಅನ್ನು ಅಲ್ಲಿ cancel ಮಾಡಿ ಬೈಲಹೊಂಗಲಕ್ಕೆ ಹಾಕಿದ್ದಾರೆ, ದಯವಿಟ್ಟು ಅದನ್ನು restore ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಬ್ಕಾರಿ ಮತ್ತು ಲಾಟರಿ ವಿಶೇಷ ಪೊಲೀಸ್ ಠಾಣೆಗಳಿಂದ ಸರಕಾರಕ್ಕೆ ಬರುತ್ತಿರುವ ಆದಾಯ ಮತ್ತು ನೀಡಿರುವ ಸವಲತ್ತುಗಳು

45 **(478) ಶ್ರೀ ತನ್ವೀರ್ ಸೇಠ್** (ನರಸಿಂಹರಾಜ) (ಗೃಹ ಮತ್ತು ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ಅಬ್ಕಾರಿ ಮತ್ತು ಲಾಟರಿ ವಿಶೇಷ ದಳದ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯೊಂದಿಗೆ ವಿವರ ಒದಗಿಸುವುದು);

ಆ) ಅಬ್ಕಾರಿ ಮತ್ತು ಲಾಟರಿ ವಿಶೇಷ ಪೊಲೀಸ್ ಠಾಣೆಗಳನ್ನು ಖಾಯಂ ಅಥವಾ ತಾತ್ಕಾಲಿಕವಾಗಿ ರೂಪಿಸಲಾಗಿದೆಯೇ ಮತ್ತು ಇನ್ನೂ ಎಷ್ಟು ವರ್ಷಗಳ ಕಾಲ ಮುಂದುವರೆಸಲಾಗುತ್ತದೆ.

ಇ) ಅಬ್ಕಾರಿ ಮತ್ತು ಲಾಟರಿ ವಿಶೇಷ ಪೊಲೀಸ್ ಠಾಣೆ ಪ್ರಾರಂಭ ವಾದಾಗಿನಿಂದಲೂ ರಾಜ್ಯದಲ್ಲಿ ಧಾಳಿ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ಒದಗಿಸುವುದು);

ಈ) ಅಬ್ಕಾರಿ ಮತ್ತು ಲಾಟರಿ ವಿಶೇಷದಳ ಪೊಲೀಸ್ ಠಾಣೆ ಪ್ರಾರಂಭವಾದ ನಂತರ ಅಬ್ಕಾರಿ ಆದಾಯ ಎಷ್ಟು ಹೆಚ್ಚಳವಾಗಿದೆ (ಜಿಲ್ಲಾವಾರು ವಿವರ ಒದಗಿಸುವುದು);

ಉ) ಅಬ್ಕಾರಿ ಮತ್ತು ಲಾಟರಿ ವಿಶೇಷದಳ ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ನೀಡಿರುವ ಸೌಲಭ್ಯಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು)?

ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):

ಅ) 41 ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಕರ್ನಾಟಕ ರಾಜ್ಯದಲ್ಲಿ ಸಾರಾಯಿ ಮತ್ತು ಲಾಟರಿ ನಿಷೇದ ಕುರಿತಂತೆ ವಿಶೇಷ ಪೊಲೀಸ್ ಠಾಣೆಗಳನ್ನು ತಾತ್ಕಾಲಿಕವಾಗಿ ರೂಪಿಸಲಾಗಿದ್ದು, ಹಾಗೂ ಅದರ ಅಗತ್ಯತೆವಿರುವವರೆಗೆ ಮುಂದುವರೆಸಲಾಗುವುದು.

ಇ) ಅಬ್ಕಾರಿ ಮತ್ತು ಲಾಟರಿ ವಿಶೇಷ ಪೊಲೀಸ್ ಠಾಣೆ ಪ್ರಾರಂಭ ವಾದಾಗಿನಿಂದಲೂ 2009 ರಿಂದ ಅಕ್ಟೋಬರ್ – 2011 ರವರೆಗೆ ರಾಜ್ಯದಲ್ಲಿ ದಾಳಿ ಮಾಡಿರುವ ಪ್ರಕರಣಗಳ ಸಂಖ್ಯೆ.

1) 2009 ರಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ: 1389

2) 2010 ರಲ್ಲಿ ದಾಖಲಿಸಿರುವ ಪ್ರಕರಣಗಳ ಸಂಖ್ಯೆ: 2850.

3) ಅಕ್ಟೋಬರ್–2011 ರವರೆಗೆ ದಾಖಲಿಸಿರುವ ಪ್ರಕರಣಗಳ ಸಂಖ್ಯೆ: 3039.

ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿಯನ್ನು ಅನುಬಂಧ–2ರಲ್ಲಿ ನೀಡಲಾಗಿದೆ).

ಈ) ರಾಜ್ಯ ಅಬಕಾರಿ ಇಲಾಖೆಗೆ ಅಬಕಾರಿ ಆದಾಯ ವಾರ್ಷಿಕವಾಗಿ ಕೆಳಕಂಡಂತೆ ಇರುತ್ತದೆ.

ವರ್ಷ	2008–09	2009–10	2010–11
ಅಬ್ಕಾರಿ ಆದಾಯ ವರ್ಷವಾರು ಹೆಚ್ಚಲಿರುವ ಅಬ್ಕಾರಿ ಆದಾಯ ರೂ. (ಕೋಟಿಗಳಲ್ಲಿ)	5792.41	7001.09	8345.39
	1,263.41	1,208.68	1,344.30

(ಜಿಲ್ಲಾವಾರು ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ).

ಉ) ವಾಹನ, ವಸತಿಗೃಹ ಉಚಿತ ಪಡಿತರ ಚೀಟಿ, ಕಿಟ್ ಸಾಮಾಗ್ರಿಗಳನ್ನು ನೀಡಲಾಗಿದೆ.

ಅನುಬಂಧ – 1

ಕ್ರ. ಸಂ.	ವಿಶೇಷ ಪೊಲೀಸ್ ಠಾಣೆಯ ಹೆಸರು	ವಿಶೇಷ ಪೊಲೀಸ್ ಠಾಣಾ ವ್ಯಾಪ್ತಿಗೆ ಉದ್ದೇಶಿಸಿದ ಪ್ರದೇಶ ಮತ್ತು ಸ್ಥಳೀಯ ವ್ಯಾಪ್ತಿ
1	2	3
1.	ಪೊಲೀಸ್ ನಿರೀಕ್ಷಕರು, ಪೂರ್ವ ವಿಶೇಷ ಪೊಲೀಸ್ ಠಾಣೆ, ಬೆಂಗಳೂರು ನಗರ	ಡಿ.ಸಿ.ಪಿ. (ಉತ್ತರ ವಿಭಾಗ), ಡಿ.ಸಿ.ಪಿ. (ಈಶಾನ್ಯ ವಿಭಾಗ) ಡಿ.ಸಿ.ಪಿ. (ಪೂರ್ವ ವಿಭಾಗ) ಬೆಂಗಳೂರು ಪೊಲೀಸ್ ಆಯುಕ್ತರ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳು
2.	ಪೊಲೀಸ್ ನಿರೀಕ್ಷಕರು, ಪಶ್ಚಿಮ ವಿಶೇಷ ಪೊಲೀಸ್ ಠಾಣೆ, ಬೆಂಗಳೂರು ನಗರ	ಡಿ.ಸಿ.ಪಿ. (ಕೇಂದ್ರ ವಿಭಾಗ), ಡಿ.ಸಿ.ಪಿ. (ದಕ್ಷಿಣ ವಿಭಾಗ) ಡಿ.ಸಿ.ಪಿ. (ಪಶ್ಚಿಮ ವಿಭಾಗ), ಡಿ.ಸಿ.ಪಿ. (ಆಗ್ನೇಯ ವಿಭಾಗ) ಬೆಂಗಳೂರು ಪೊಲೀಸ್ ಆಯುಕ್ತ ವ್ಯಾಪ್ತಿಗೆ ಒಳಪಟ್ಟಿರುವ ಇತರೆ ಪ್ರದೇಶಗಳು.
3.	ಪೊಲೀಸ್ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ ಹೊಸಕೋಟೆ, ಬೆಂಗಳೂರು ಜಿಲ್ಲೆ.	ಹೊಸಕೋಟೆ ರೆವಿನ್ಯೂ ತಾಲ್ಲೂಕು ಮತ್ತು ಆನೇಕಲ್ ರೆವಿನ್ಯೂ ತಾಲ್ಲೂಕು
4.	ಪೊಲೀಸ್ ನಿರೀಕ್ಷಕರು ವಿಶೇಷ ಪೊಲೀಸ್ ಠಾಣೆ ದೊಡ್ಡಬಳ್ಳಾಪುರ, ಬೆಂಗಳೂರು ಜಿಲ್ಲೆ	ದೊಡ್ಡಬಳ್ಳಾಪುರ ನೆಲಮಂಗಲ ಮತ್ತು ದೇವನಹಳ್ಳಿ ರೆನಿನ್ಯೂ ತಾಲ್ಲೂಕು.
5.	ಪೊಲೀಸ್ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ ಬಾಗಲಕೋಟೆ, ಬಾಗಲಕೋಟೆ ಜಿಲ್ಲೆ	ಬಾಗಲಕೋಟೆ ಜಮಖಂಡಿ, ಬೀಳಗಿ ರೆವಿನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.

1	2	3
6.	ಪೊಲೀಸ್ ನಿರೀಕ್ಷಕರು, ಹುನಗುಂದ ವಿಶೇಷ ಪೊಲೀಸ್ ಠಾಣೆ, ಬಾಗಲಕೋಟೆ ಜಿಲ್ಲೆ	ಹುನಗುಂದ, ಬಾದಾಮಿ, ಮುಧೋಳ ರೆವಿನ್ಯೂ ತಾಲ್ಲೂಕ್ ವ್ಯಾಪ್ತಿ ಪ್ರದೇಶ
7.	ಪೊಲೀಸ್ ನಿರೀಕ್ಷಕರು, ತುಮಕೂರು ವಿಶೇಷ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ.	ತುಮಕೂರು, ಕುಣಿಗಲ್, ಕೊರಟಗೆರೆ, ಗುಬ್ಬಿ ಮತ್ತು ತಿಪಟೂರು ರೆವಿನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ
8.	ಪೊಲೀಸ್ ನಿರೀಕ್ಷಕರು, ಶಿರಾ ವಿಶೇಷ ಪೊಲೀಸ್ ಠಾಣೆ ತುಮಕೂರು ಜಿಲ್ಲೆ	ಶಿರಾ, ಮಧುಗಿರಿ, ಪಾವಗಡ, ಚಿಕ್ಕನಾಯಕನಹಳ್ಳಿ ಮತ್ತು ತುರುವೆಕೆರೆ ರೆವಿನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
9.	ಪೊಲೀಸ್ ನಿರೀಕ್ಷಕರು, ಗುಲಬರ್ಗಾ ವಿಶೇಷ ಪೊಲೀಸ್ ಠಾಣೆ, ಗುಲಬರ್ಗಾ ಜಿಲ್ಲೆ	ಗುಲಬರ್ಗಾ, ಆಳಂದ, ಅಫ್ಜಲ್‌ಪುರ ಮತ್ತು ಜೇವರ್ಗಿ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
10.	ಪೊಲೀಸ್ ನಿರೀಕ್ಷಕರು, ಯಾದಗಿರಿ ವಿಶೇಷ ಪೊಲೀಸ್ ಠಾಣೆ, ಯಾದಗಿರಿ ಜಿಲ್ಲೆ	ಯಾದಗಿರಿ ಸುರಪುರ, ಶಹಪುರ, ಚಿತ್ತಾಪುರ, ಚೆಂಚುಲಿ ಮತ್ತು ಸೇಡಂ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
11.	ಪೊಲೀಸ್ ನಿರೀಕ್ಷಕರು, ಬಳ್ಳಾರಿ ವಿಶೇಷ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ	ಬಳ್ಳಾರಿ, ಶಿರಗುಪ್ಪ, ಹೊಸಪೇಟೆ, ಸಂಡೂರು ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
12.	ಪೊಲೀಸ್ ನಿರೀಕ್ಷಕರು, ಹೂವಿನ ಹಡಗಲಿ ವಿಶೇಷ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ	ಹೂವಿನ ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಗಿ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.

1	2	3
13.	ಪೊಲೀಸ್ ನಿರೀಕ್ಷಕರು, ಬೆಳಗಾಂ ವಿಶೇಷ ಪೊಲೀಸ್ ಠಾಣೆ ಬೆಳಗಾಂ ಜಿಲ್ಲೆ.	ಬೆಳಗಾಂ, ಖಾನಾಪುರ, ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
14.	ಪೊಲೀಸ್ ನಿರೀಕ್ಷಕರು, ಗೋಕಾಕ್ ವಿಶೇಷ ಪೊಲೀಸ್ ಠಾಣೆ, ಬೆಳಗಾಂ ಜಿಲ್ಲೆ.	ಗೋಕಾಕ್ ಚಿಕ್ಕೋಡಿ, ಅಥಣಿ, ಹುಕ್ಕೇರಿ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
15.	ಪೊಲೀಸ್ ನಿರೀಕ್ಷಕರು, ಕಾರವಾರ, ವಿಶೇಷ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆ	ಕಾರವಾರ, ಅಂಕೋಲ, ಕುಮಟ, ಹೊನ್ನಾವರ ಮತ್ತು ಭಟ್ಕಳ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
16.	ಪೊಲೀಸ್ ನಿರೀಕ್ಷಕರು, ಶಿರಸಿ ವಿಶೇಷ ಪೊಲೀಸ್ ಠಾಣೆ, ಉತ್ತರ ಕನ್ನಡ ಜಿಲ್ಲೆ	ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಜೋಯಿಡಾ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
17.	ಪೊಲೀಸ್ ನಿರೀಕ್ಷಕರು, ಶಿವಮೊಗ್ಗ ವಿಶೇಷ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ	ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
18.	ಪೊಲೀಸ್ ನಿರೀಕ್ಷಕರು, ಸಾಗರ ವಿಶೇಷ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ	ಸಾಗರ, ಹೊಸನಗರ ಸೊರಬ, ಶಿಕಾರಿಪುರ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
19.	ಪೊಲೀಸ್ ನಿರೀಕ್ಷಕರು, ಕೋಲಾರ ವಿಶೇಷ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ	ಕೋಲಾರ, ಮಾಲೂರು, ಮುಳಬಾಗಿಲು ಮತ್ತು ಶ್ರೀನಿವಾಸಪುರ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.

1	2	3
20.	ಪೊಲೀಸ್ ನಿರೀಕ್ಷಕರು, ಕೆ.ಜಿ.ಎಫ್. ವಿಶೇಷ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ	ಕೆ.ಜಿ.ಎಫ್. ಮತ್ತು ಬಂಗಾರಪೇಟೆ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
21.	ಪೊಲೀಸ್ ನಿರೀಕ್ಷಕರು, ಮೈಸೂರು ಜಿಲ್ಲೆ ವಿಶೇಷ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ	ಮೈಸೂರು ಜಿಲ್ಲೆಯ ರೆವೆನ್ಯೂ ತಾಲ್ಲೂಕು ವ್ಯಾಪ್ತಿ ಪ್ರದೇಶ.
22.	ಪೊಲೀಸ್ ನಿರೀಕ್ಷಕರು, ಮೈಸೂರು ನಗರ ವಿಶೇಷ ಪೊಲೀಸ್ ಠಾಣೆ ಮೈಸೂರು ಜಿಲ್ಲೆ.	ಮೈಸೂರು ನಗರ ಪೊಲೀಸ್ ಆಯುಕ್ತರು ವ್ಯಾಪ್ತಿ ಪ್ರದೇಶ.
23.	ಪೊಲೀಸ್ ನಿರೀಕ್ಷಕರು, ಚಾಮರಾಜನಗರ ವಿಶೇಷ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ.	ಚಾಮರಾಜನಗರ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
24.	ಪೊಲೀಸ್ ನಿರೀಕ್ಷಕರು, ಹಾಸನ ವಿಶೇಷ ಪೊಲೀಸ್ ಠಾಣೆ, ಹಾಸನ ಜಿಲ್ಲೆ.	ಹಾಸನ ಜಿಲ್ಲೆ, ರೆವೆನ್ಯೂ ವ್ಯಾಪ್ತಿ ಪ್ರದೇಶ.
25.	ಪೊಲೀಸ್ ನಿರೀಕ್ಷಕರು, ಮಂಡ್ಯ ವಿಶೇಷ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ	ಮಂಡ್ಯ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
26.	ಪೊಲೀಸ್ ನಿರೀಕ್ಷಕರು, ಮಡಿಕೇರಿ ವಿಶೇಷ ಪೊಲೀಸ್ ಠಾಣೆ, ಕೊಡಗು ಜಿಲ್ಲೆ.	ಕೊಡಗು ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.

1	2	3
27.	ಪೊಲೀಸ್ ನಿರೀಕ್ಷಕರು, ದಾವಣಗೆರೆ ವಿಶೇಷ ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆ.	ದಾವಣಗೆರೆ ಜಿಲ್ಲಾ ರೆವೆನ್ಯೂ ಪ್ರದೇಶ.
28.	ಪೊಲೀಸ್ ನಿರೀಕ್ಷಕರು, ಚಿತ್ರದುರ್ಗ ವಿಶೇಷ ಪೊಲೀಸ್ ಠಾಣೆ, ಚಿತ್ರದುರ್ಗ ಜಿಲ್ಲೆ.	ಚಿತ್ರದುರ್ಗ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
29.	ಪೊಲೀಸ್ ನಿರೀಕ್ಷಕರು, ಮಂಗಳೂರು ವಿಶೇಷ ಪೊಲೀಸ್ ಠಾಣೆ, ದ.ಕ. ಜಿಲ್ಲೆ.	ದಕ್ಷಿಣ ಕನ್ನಡ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
30.	ಪೊಲೀಸ್ ನಿರೀಕ್ಷಕರು, ಚಿಕ್ಕಮಗಳೂರು ವಿಶೇಷ ಪೊಲೀಸ್ ಠಾಣೆ, ಚಿಕ್ಕಮಗಳೂರು ಜಿಲ್ಲೆ.	ಚಿಕ್ಕಮಗಳೂರು ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
31.	ಪೊಲೀಸ್ ನಿರೀಕ್ಷಕರು, ಉಡುಪಿ ವಿಶೇಷ ಪೊಲೀಸ್ ಠಾಣೆ, ಉಡುಪಿ ಜಿಲ್ಲೆ.	ಉಡುಪಿ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
32.	ಪೊಲೀಸ್ ನಿರೀಕ್ಷಕರು, ಧಾರವಾಡ ವಿಶೇಷ ಪೊಲೀಸ್ ಠಾಣೆ, ಧಾರವಾಡ ಜಿಲ್ಲೆ.	ಧಾರವಾಡ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
33.	ಪೊಲೀಸ್ ನಿರೀಕ್ಷಕರು, ಗದಗ ವಿಶೇಷ ಪೊಲೀಸ್ ಠಾಣೆ, ಗದಗ ಜಿಲ್ಲೆ.	ಗದಗ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.

1	2	3
34.	ಪೊಲೀಸ್ ನಿರೀಕ್ಷಕರು, ಹುಬ್ಬಳ್ಳಿ–ಧಾರವಾಡ ನಗರ ವಿಶೇಷ ಪೊಲೀಸ್ ಠಾಣೆ, ಜಿಲ್ಲೆ.	ಹುಬ್ಬಳ್ಳಿ–ಧಾರವಾಡ ನಗರ ಕಮೀಷನರೇಟ್ ವ್ಯಾಪ್ತಿ ಪ್ರದೇಶ.
35.	ಪೊಲೀಸ್ ನಿರೀಕ್ಷಕರು, ಹಾವೇರಿ ವಿಶೇಷ ಪೊಲೀಸ್ ಠಾಣೆ, ಹಾವೇರಿ ಜಿಲ್ಲೆ.	ಹಾವೇರಿ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
36.	ಪೊಲೀಸ್ ನಿರೀಕ್ಷಕರು, ಬಿಜಾಪುರ ವಿಶೇಷ ಪೊಲೀಸ್ ಠಾಣೆ, ಬಿಜಾಪುರ ಜಿಲ್ಲೆ.	ಬಿಜಾಪುರ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
37.	ಪೊಲೀಸ್ ನಿರೀಕ್ಷಕರು, ಬೀದರ್ ವಿಶೇಷ ಪೊಲೀಸ್ ಠಾಣೆ, ಬೀದರ್ ಜಿಲ್ಲೆ.	ಬೀದರ್ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ
38.	ಪೊಲೀಸ್ ನಿರೀಕ್ಷಕರು, ರಾಯಚೂರು ವಿಶೇಷ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ.	ರಾಯಚೂರು ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
39.	ಪೊಲೀಸ್ ನಿರೀಕ್ಷಕರು, ಕೊಪ್ಪಳ ವಿಶೇಷ ಪೊಲೀಸ್ ಠಾಣೆ, ಕೊಪ್ಪಳ ಜಿಲ್ಲೆ	ಕೊಪ್ಪಳ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.
40.	ಪೊಲೀಸ್ ನಿರೀಕ್ಷಕರು, ಚಿಕ್ಕಬಳ್ಳಾಪುರ ವಿಶೇಷ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ ಜಿಲ್ಲೆ	ಚಿಕ್ಕಬಳ್ಳಾಪುರ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.

1	2	3
41.	ಪೊಲೀಸ್ ನಿರೀಕ್ಷಕರು ರಾಮನಗರ ವಿಶೇಷ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ.	ರಾಮನಗರ ಜಿಲ್ಲಾ ರೆವೆನ್ಯೂ ವ್ಯಾಪ್ತಿ ಪ್ರದೇಶ.

ಅನುಬಂಧ – 2

ಕ್ರ. ಸಂ.	ಜಿಲ್ಲೆಯ ಹೆಸರು	2009ನೇ ಸಾಲಿನಲ್ಲಿ ದಾಖಲಿಸಿದ ಒಟ್ಟು ಪ್ರಕರಣಗಳ ಸಂಖ್ಯೆ	2010ನೇ ಸಾಲಿನಲ್ಲಿ ದಾಖಲಿಸಿದ ಒಟ್ಟು	2011ನೇ ಸಾಲಿನಲ್ಲಿ ದಾಖಲಿಸಿದ ಒಟ್ಟು ಪ್ರಕರಣಗಳ ಸಂಖ್ಯೆ (31.10.2011)
1	2	3	4	5
1.	ಬೆಂಗಳೂರು ನಗರ	4	128	122
2.	ಬೆಂಗಳೂರು ಗ್ರಾ	9	94	103
3.	ತುಮಕೂರು	50	145	170
4.	ಕೋಲಾರ	32	83	118
5.	ರಾಮನಗರ	65	67	76
6.	ಚಿಕ್ಕಬಳ್ಳಾಪುರ	3	62	90
7.	ಮೈಸೂರು	88	187	189
8.	ಚಾಮರಾಜನಗರ	53	100	87
9.	ಕೊಡಗು	13	45	103
10.	ಮಂಡ್ಯ	35	74	110
11.	ಹಾಸನ	90	86	160
12.	ದಕ್ಷಿಣ ಕನ್ನಡ	39	46	77
13.	ಉತ್ತರ ಕನ್ನಡ	50	131	148
14.	ಚಿಕ್ಕಮಗಳೂರು	53	118	92
15.	ಉಡುಪಿ	18	24	19
16.	ದಾವಣಗೆರೆ	67	88	65
17.	ಶಿವಮೊಗ್ಗ	114	143	128
18.	ಬಳ್ಳಾರಿ	53	111	105
19.	ಚಿತ್ರದುರ್ಗ	54	107	66
20.	ಬೆಳಗಾಂ	56	125	145
21.	ಬಾಗಲಕೋಟೆ	50	103	125
22.	ಗದಗ	35	102	93
23.	ಹಾವೇರಿ	29	60	70
24.	ಧಾರವಾಡ	103	141	125
25.	ಬಿಜಾಪುರ	51	71	63
26.	ಗುಲಬರ್ಗಾ	41	82	65
27.	ಬೀದರ್	28	73	58
28.	ರಾಯಚೂರು	86	125	135
29.	ಯಾದಗಿರಿ	3	82	78
30.	ಕೊಪ್ಪಳ	17	47	54
	ಒಟ್ಟು	1389	2850	3039

ಅನುಬಂಧ – 3

ಅಬಕಾರಿ ಆದಾಯದ ಜಿಲ್ಲಾವಾರು ಮತ್ತು ವಾರ್ಷಿಕವಾರು ವಿವರ

ಕೋಟಿ ರೂ.ಗಳಲ್ಲಿ

ಕ್ರ.	ಜಿಲ್ಲೆಯ ಹೆಸರು	2006–07	2007–08	2008–09	2009–10	2010–11
1	2	3	4	5	6	7
1.	ಬೆಂಗಳೂರು ನಗರ	1481.35	2295.44	3031.27	3619.79	3599.98
2.	ಬೆಂಗಳೂರು ಜಿಲ್ಲೆ	740.72	1118.13	849.70	961.18	1569.98
3.	ಬಾಗಲಕೋಟೆ	41.91	16.63	24.59	33.22	24.19
4.	ಬೆಳಗಾಂ	203.26	114.06	113.63	178.70	199.54
5.	ಬಳ್ಳಾರಿ	283.17	294.34	471.93	633.90	757.53
6.	ಬೀದರ್	62.19	78.41	121.00	25.61	23.25
7.	ಬಿಜಾಪೂರ	32.13	13.20	7.65	6.92	13.14
8.	ಚಾಮರಾಜನಗರ	33.60	15.23	3.27	4.82	4.64
9.	ಚಿಕ್ಕಮಗಳೂರು	70.38	28.86	6.13	7.16	7.31
10.	ಚಿಕ್ಕಬಳ್ಳಾಪುರ			63.26	112.78	157.98
11.	ಚಿತ್ರದುರ್ಗ	73.40	24.11	8.38	8.60	13.01
12.	ದಕ್ಷಿಣ ಕನ್ನಡ	188.65	158.52	126.89	169.19	231.67
13.	ದಾವಣಗೆರೆ	98.10	50.63	35.12	42.90	103.77
14.	ಧಾರವಾಡ	55.36	75.56	202.35	221.63	209.19
15.	ಗದಗ	23.91	11.43	3.48	4.44	4.23
16.	ಗುಲಬರ್ಗ	100.89	38.82	15.11	61.44	89.81
17.	ಹಾಸನ	87.66	34.42	8.07	35.15	245.23
18.	ಹಾವೇರಿ	50.56	16.14	4.79	5.32	8.94
19.	ಕೊಡಗು	46.90	18.83	5.43	7.41	8.33
20.	ಕೋಲಾರ	105.16	60.79	16.24	14.93	26.96

21. ಕೊಪ್ಪಳ	47.53	18.21	4.48	9.17	35.92
22. ಮೈಸೂರು	109.93	53.33	9.73	12.76	11.97
23. ಮಂಡ್ಯ	182.25	98.51	73.81	82.36	85.66
24. ರಾಯಚೂರು	63.30	27.32	22.28	31.07	30.75
25. ರಾಮನಗರ			444.26	557.56	631.38
26. ಶಿವಮೊಗ್ಗ	89.17	28.96	7.97	8.16	11.66
27. ತುಮಕೂರು	125.19	35.91	22.35	23.98	93.11
28. ಉಡುಪಿ	92.60	70.40	84.47	115.43	133.22
29. ಉತ್ತರ ಕನ್ನಡ	39.73	15.74	4.76	5.51	5.75
30. ಯಾದಗಿರಿ					7.33
ಒಟ್ಟು	4529.00	4811.93	5792.41	7001.09	8345.39

ಬಿ. ರಾಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ

(ಪೊಲೀಸ್ ಪಟ್ಟಿ)

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಬಹುಶ: ಕಳೆದ ಮೂರು ವರ್ಷಗಳಲ್ಲಿ ವರ್ಷ ವರ್ಷ ಪ್ರಕರಣಗಳೂ ಹೆಚ್ಚಾಗಿವೆ ಮತ್ತು ಇಲಾಖೆಗೆ ಆದಾಯ ಕೂಡ ಬಂದಿದೆ. ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ, ತಾತ್ಕಾಲಿಕವಾಗಿ ಪ್ರಾರಂಭ ಮಾಡಿರುವ ಈ ವಿಶೇಷ ಠಾಣೆಗಳನ್ನು ಖಾಯಂ ಮಾಡುವ ಉದ್ದೇಶವೇನಾದರೂ ಸರ್ಕಾರಕ್ಕಿದೆಯೇ?

ಶ್ರೀ ಆರ್. ಅಶೋಕ್: ಹಿಂದೆ ಈ ಸಾರಾಯಿ ನಿಷೇಧ ಮಾಡಿದ ಸಂದರ್ಭದಲ್ಲಿ ಈ ರೀತಿಯ ವಿಶೇಷವಾದ 41 ಪೊಲೀಸ್ ಠಾಣೆಗಳನ್ನು ರಾಜ್ಯದ ವಿವಿಧೆಡೆ ಕೆಲಸ ಮಾಡುತ್ತಿವೆ. ಮುಖ್ಯವಾಗಿ ಕಳ್ಳಭಟ್ಟಿ ಸಾರಾಯಿ ಈ ತರಹದ್ದು ಮತ್ತು ಗೋವಾದಿಂದ ಕಡಿಮೆ ಬೆಲೆಯದ್ದು, ನನಗೆ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಮಿನಿಮಂ ಕ್ವಾರ್ಟರ್‌ಗೆ ರೂ. 40 ಇರಬಹುದೇನೊ, ಅದು ಗೋವಾದಲ್ಲಿ ರೂ. 19ಕ್ಕೆ ಸಿಗುತ್ತದೆ. ಅದು ರೂ. 10ಕ್ಕೆ ಸಿಗುವುದರಿಂದ ಅದನ್ನು ರಸ್ತೆ ಮತ್ತು ಸಮುದ್ರದ ಮೂಲಕವೂ ತರುವ ಕೆಲಸವನ್ನು

ಮಾಡುತ್ತಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ಲಾಸ್ ಆಗುತ್ತಿದೆ. ಇದನು ತಡೆಗಟ್ಟುವ ದೃಷ್ಟಿಯಿಂದ ಈ ಒಂದು ಪಡೆಯನ್ನು 41ಕ್ಕೆ ಸೀಮಿತ ಮಾಡಿದ್ದೇವೆ, ಇದು ಮುಂದುವರೆಯುತ್ತದೆ. ಈಗಾಗಲೇ ತಮಗೆ ಗೊತ್ತಿರುವ ಮಾಹಿತಿಯ ಪ್ರಕಾರ, ಈ ದಾಳಿಗಳಿಂದ ಅಬಕಾರಿ ಆದಾಯ 2008–09ರಲ್ಲಿ ರೂ. 1263 ಕೋಟಿ ಜಾಸ್ತಿಯಾಗಿದೆ, 2010–11ರಲ್ಲಿ ರೂ. 1344 ಕೋಟಿ ಜಾಸ್ತಿಯಾಗಿದೆ ಈ ದೃಷ್ಟಿಯಿಂದ ಇದನ್ನು ಮುಂದುವರೆಸುತ್ತೇವೆ. ಎಲ್ಲಿಯವರೆಗೆ ಇದರ ಅವಶ್ಯಕತೆ ಇದೆ, ಅಲ್ಲಿಯವರೆಗೆ ಮುಂದುವರೆಸುತ್ತೇವೆ. ಈಗಾಗಲೇ 44 ಬೊಲೆರೋ ಜೀಪುಗಳನ್ನು ಇದಕ್ಕೋಸ್ಕರ ಮೀಸಲಿಟ್ಟಿದ್ದೇವೆ. 4 ಟಾಟಾ ಸುಮೋ, 43 ದ್ವಿಚಕ್ರ ವಾಹನಗಳು ಈ ತರಹದ ವ್ಯವಸ್ಥೆಗಳನ್ನು ಮಾಡುವುದರ ಮುಖಾಂತರ ಕಳ್ಳಭಟ್ಟಿ ಸಾರಾಯಿ ತೆಗೆಯುವುದರಿಂದ ಜನಗಳಿಗೆ ಪ್ರಾಣ ಹಾನಿ ಆಗಿ ನಷ್ಟವಾಗುತ್ತಿದೆ ಅದನ್ನು ತಡೆಗಟ್ಟುವುದು ಇದರ ಮುಖ್ಯ ಉದ್ದೇಶ. ಆದ್ದರಿಂದ ಇದನ್ನು ಎಲ್ಲಿಯವರೆಗೆ ಅವಶ್ಯಕತೆ ಇದೆ, ಎಲ್ಲಿಯವರೆಗೆ ಈ ದಂಧೆ ನಿಲ್ಲುವುದಿಲ್ಲ, ಅಲ್ಲಿಯವರೆಗೆ ಈ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಸ್. ಸುರೇಶ್ ಕುಮಾರ್: (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 08–12–2011ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 93 ಪ್ರಶ್ನೆಗಳ ಪೈಕಿ 71 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು (ಅನುಬಂಧ–1)

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಡಿ. ವಿ. ಸದಾನಂದಗೌಡ (ಮಾನ್ಯ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 2010–11ನೇ ಸಾಲಿನ ಹಣಕಾಸು ಲೆಕ್ಕ ಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಮಂಡಿಸಲಾಯಿತು